# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 104/2022

ಪಿಡಬ್ಲ್ಯೂ: 04
ಸಿಡಬ್ಲ್ಯೂ: 03

**<u>ದಿನಾಂಕಃ 21-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಸಾಕ್ಷಿದಾರರ ಹೆಸರು : ಹುಲುಗೇಶ
ತಂದೆಯ ಹೆಸರು : ತಿಪ್ಪೇಸ್ವಾಮಿ
ವಯಸ್ಸು : 23 ವರ್ಷ
ಉದ್ಯೋಗ : ಚಾಲಕ
ವಾಸ ಸ್ಥಳ : ಭೂತಯ್ಯನಹಟ್ಟಿ

**<u>ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ</u>**

**1** ರಿಂದ **4** ನೇ ಆರೋಪಿತರು ನನ್ನ ಸಂಬಂಧಿಕರು. ಪ್ರಾಸಾ–**1, 2** ಹಾಗೂ ಚಾಸಾ–**4** ಇವರ ಗುರುತು ಇದೆ. **2019** ರಲ್ಲಿ ನನಗೆ ಮಣ್ಣು ಹೊಡೆಯಲೆಂದು ಪ್ರಾಸಾ–**1** ರವರು ಅವರ ಜಮೀನಿಗೆ ಕರೆದುಕೊಂಡು ಹೋಗಿದ್ದರು. ನಾನು ಟ್ರಾಕ್ಟರ್ ತೆಗೆದುಕೊಂಡು ಚಾಲಕನಾಗಿ ಹೋಗಿದ್ದೆ. ಆಗ ಮುಂಜಾನೆ **7.30** ಗಂಟೆಯಾಗಿತ್ತು. ಸುಮಾರು ಮುಂಜಾನೆ **8.00** ರವರೆಗೆ ನಾವು ಕೆಲಸ ಮಾಡಿದೆವು. ಅವರ ಜಮೀನಿನಿಂದ **100** ಮೀಟರ್ ದೂರದಲ್ಲಿದ್ದಂತಹ ಸ್ಥಳದಿಂದ ಮಣ್ಣನ್ನು ನಾವು ಪ್ರಾಸಾ–**1** ರವರ ಜಮೀನಿಗೆ ಹೊಡೆಯುತ್ತಿದ್ದೆ. ಆಗ **3** ನೇ ಆರೋಪಿಯ ತಂದೆ ಬಂದು ನಾವು ಮಣ್ಣು ಹೊಡೆಯಕೂಡದು ಎಂದು ನಮ್ಮ ಕೆಲಸಕ್ಕೆ ತಡೆ ಮಾಡಿದರು. ಆ ವಿಚಾರವಾಗಿ ಅವರುಗಳು ಗಲಾಟೆ ಮಾಡಿಕೊಂಡರು ಅಷ್ಟರಲ್ಲೆ ನನಗೆ ನಮ್ಮ ಮನೆಯಿಂದ ಮೊಬೈಲ್ ಕರೆ ಬಂದಿದ್ದು ಮಗಳಿಗೆ ಹುಷಾರಿಲ್ಲ ಕೂಡಲೇ ಬರುವಂತೆ ತಿಳಿಸಿದ್ದರಿಂದ ನಾನು ಕೂಡಲೇ ಅಲ್ಲಿಂದ ಹೊರಟುಬಂದೆ. ಆ ಜಮೀನು ನಮಗೆ ಸೇರಿದ್ದು ಎಂದು **3** ನೇ ಆರೋಪಿಯ ತಂದೆ ಹೇಳುತ್ತಿದ್ದರು. ಮುಂದೆ ಅವರುಗಳ ಮಧ್ಯೆ ಏನು ನಡೆಯಿತೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನೇನು ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ</u>**

**2.** ಆ ದಿನ **23–08–2019** ಇತ್ತು ಎನ್ನುವುದು ನಿಜ. ಆಗ ಸ್ಥಳದಲ್ಲಿ ನಾನು, ಪ್ರಾಸಾ–**1** ಹಾಗೂ **2** ಇದ್ದೆವು ಎನ್ನುವುದು ನಿಜ. ತದ ನಂತರ ಚಾಸಾ–**4** / ರಂಗಸ್ವಾಮಿ ಕೂಡಾ ಅಲ್ಲಿಗೆ ಬಂದ ಎನ್ನುವುದು ನಿಜ. ಆಗ **1** ರಿಂದ **4** ನೇ ಆರೋಪಿತರು ಅಲ್ಲಿಗೆ ಬಂದರು ಎನ್ನುವುದು ನಿಜ. ಬರುತ್ತಿದ್ದಂತೆ ಅವರು ನಮ್ಮ ಜಮೀನಿನ ಮಣ್ಣನ್ನು ಯಾಕೆ ಲೋಡ್ ಮಾಡುತ್ತಿದ್ದಿಯಾ ಸೂಳೆ ಮಗನೆ ಬೋಳಿ ಮಗನೆ ಎನ್ನುತ್ತಾ ಬೈಯಲು ಆರಂಭಿಸಿದರು ಎನ್ನುವುದು ನಿಜ. ತದ

ನಂತರ **1** ನೇ ಆರೋಪಿ ಕಲ್ಲು ತೆಗೆದುಕೊಂಡು ಪ್ರಾಸಾ–**1** ರವರ ಬಲ ಹಣೆಗೆ ಮತ್ತು ಮೂಗಿಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಅದನ್ನು ನಾನು ನೋಡಿಲ್ಲ. **2** ಮತ್ತು **3** ನೇ ಆರೋಪಿತರು ಸದರಿ ಪ್ರಾಸಾ–**1** ರವರಿಗೆ ಕಾಲಿನಿಂದ ಸೊಂಟಕ್ಕೆ ಜಾಡಿಸಿ ಹೊಡೆದರು ಎನ್ನುವುದು ನಿಜ. ನಂತರ ಆತನನ್ನು ಒಂದು ಗುಂಡಿಗೆ ಕೆಡವಿದರು ಎನ್ನುವುದನ್ನು ನಾನು ನೋಡಿಲ್ಲ. ಆಗ ಪ್ರಾಸಾ–**2** / ಈರಣ್ಣ ನನ್ನ ಮಗನಿಗೆ ಏಕೆ ಹಾಕೆ ಮಾಡುತ್ತಿದ್ದಿರಾ ಎಂದು ಆರೋಪಿತರಿಗೆ ಕೇಳುತ್ತಾ ಪ್ರಾಸಾ–**1** ರವರನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದ ಎಂದರೆ ಅಷ್ಟೊತ್ತಿಗೆ ನಾನು ಅಲ್ಲಿ ಇರಲಿಲ್ಲ. ಆದಾಗ್ಯೂ ಕೂಡಾ ಸದರಿ ಆರೋಪಿತರು ಕೈಕಾಲಿನಿಂದ ಹೊಡೆದರು ಎನ್ನುವುದು ಗೊತ್ತಿಲ್ಲ. ಮುಂದೆ ಪ್ರಾಸಾ–**1** ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋದೆ ಎನ್ನುವುದು ನಿಜ. ಈಗ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು **1** ಕಲ್ಲಿನಿಂದ ಆ ದಿನ ಪ್ರಾಸಾ–**1** ರವರಿಗೆ ಹೊಡೆಯಲಾಯಿತು ಎನ್ನುವುದು ಗೊತ್ತಿಲ್ಲ. ನಾನು ಆ ದಿನ **20** ಲೋಡಿನಷ್ಟು ಮಣ್ಣನು ಹೊಡೆದಿದ್ದೆ. ಒಂದು ಲೋಡು ಹೊಡೆಯಲು ಸುಮಾರು ಕಾಲುಗಂಟೆ ಬೇಕಾಗುತ್ತದೆ. **20** ಲೋಡು ಹೊಡೆಯಲು ನನಗೆ ಮುಂಜಾನೆ **10.30** ರವರೆಗೆ ವೇಳೆ ಬೇಕಾಯಿತು ಎನ್ನುವುದು ನಿಜ. ಪ್ರಾಸಾ–**1** ಆ ದಿನ ಬೈಕಿನಲ್ಲಿ ಆಸ್ಪತ್ರೆಗೆ ಹೋದ. ಆತನೊಂದಿಗೆ ಅವನ ತಂದೆ ಹಾಗೂ ಆತನ ಮಾವ ಹೋದರು. ಅವರು ಆ ಸ್ಥಳದಿಂದ ಹೊರಟಾಗ ಸುಮಾರು **11.00** ಗಂಟೆಯಾಗಿತ್ತು. ಸುಮಾರು **10.15** ರವರೆಗೆ ಟ್ರಾಕ್ಟರ್ ಆ ಸ್ಥಳದಲ್ಲೆ ಇತ್ತು. ಪ್ರಾಸಾ–**1** ಇವರನ್ನು ಆಸ್ಪತ್ರೆಗೆ ಅವರ ಸಂಬಂಧಿಕರು ಕರೆದುಕೊಂಡು ಹೋದರು**,** ನನಗೆ ಅವರ ಹೆಸರು ಗೊತ್ತಿಲ್ಲ. ಮುದ್ದೆ ಮಾಲು **1** ನ್ನು ಈ ದಿನವೇ ನೋಡುತ್ತಿದ್ದೇನೆ. ಅವರು ಮಾತನಾಡಿಕೊಳ್ಳುವ ಕಾಲಕ್ಕೆ ಅವರಿಂದ ನಾನು ಸುಮಾರು **5** ಅಡಿ ದೂರದಲ್ಲಿ ನಿಂತಿದ್ದೆ.

**4.** ನಾನು ಆ ದಿನ ಕೆಲಸ ಮಾಡುತ್ತಿದ್ದ ಸ್ಥಳ ಬಯಲು ಪ್ರದೇಶ ಎನ್ನುವುದು ನಿಜ. ನಾವು ಮತ್ತು ಆರೋಪಿತರು ಆ ಬಯಲು ಪ್ರದೇಶದಲ್ಲಿ ನಿಂತಿದ್ದೆವು ಎನ್ನುವುದು ನಿಜ. ಸುಮಾರು **10** ನಿಮಿಷಗಳವರೆಗೆ ನಾನು ಆ ಗಲಾಟೆಯನ್ನು ನೋಡಿದೆ. ನಾನು **7** ನೇ ತರಗತಿ ಪಾಸಾಗಿದ್ದೇನೆ. ಆ ದಿನ ಜಗಳ **10.30** ಕ್ಕೆ ಶುರುವಾಯಿತು ಎನ್ನುವುದು ನಿಜ. ನಾನು ನೋಡಿದಾಗ ಪ್ರಾಸಾ–**1** ರವರ ಬಲ ಹಣೆಗೆ ಮತ್ತು ಮೂಗಿಗೆ ಗಾಯವಾಗಿತ್ತು ಎಂದರೆ ನಾನು ನೋಡಿಲ್ಲ. ಆತ ಆಸ್ಪತ್ರೆಗೆ ಹೊರಟ ಕಾಲಕ್ಕೆ ಅವನ ಬಲ ಹಣೆಗೆ ಪೆಟ್ಟಾಗಿದ್ದನ್ನು ಗಮನಿಸಿದೆ. ನಾನು ಆರೋಪಿತರಿಗೆ ಸಂಬಂಧಿಯಾದ ಕಾರಣ ಮುದ್ದೆ ಮಾಲು **1** ರಿಂದಲೇ ಪ್ರಾಸಾ–**1** ರವರಿಗೆ ಹಲ್ಲೆ ಮಾಡಿದ್ದನ್ನು ನೋಡಿದ್ದಾಗ್ಯೂ ಆ ವಿಷಯವನ್ನು ಹೊರತುಪಡಿಸಿ ಉಳಿದ ವಿಷಯದ ಬಗ್ಗೆ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಆತನ ಬಲ ಹಣೆಯಿಂದ ರಕ್ತ ಸೋರುತ್ತಿತ್ತು. ಗಲಾಟೆ ಆಗಿದ್ದು ಹಾಗೂ ಮುಗಿದಿದ್ದು ಒಂದೇ ಕಾಲಕ್ಕೆ ಎನ್ನುವುದು ನಿಜ. ಆ ಘಟನೆಯನ್ನು ಪೂರ್ತಿ ನಾನು

ನೋಡಿದ್ದೇನೆ ಎಂದರೆ ಸುಮಾರು **10–15** ನಿಮಿಷ ಅಲ್ಲಿ ಇದ್ದೆ. ಸದರಿ ಸಂಪೂರ್ಣ ಘಟನೆ ನಾನು ಇದ್ದಂತಹ **15** ನಿಮಿಷದಲ್ಲಿಯೇ ಮುಗಿದಿದೆ ಎಂದರೆ ಅದು ಇನ್ನೂ ನಡೆದಿತ್ತು. ಅಲ್ಲಿ ಮಣ್ಣು ತೆಗೆದ ಕುಣಿ ಇತ್ತು ಎನ್ನುವುದು ನಿಜ. ಆ ಕುಣಿಯಲ್ಲಿ ಪ್ರಾಸಾ–**1** ಬಿದ್ದಿದ್ದ ಎನ್ನುವುದು ಗೊತ್ತಿಲ್ಲ. ಆರೋಪಿತರು ಆತನನ್ನು ಕುಣಿಯಲ್ಲಿ ದಬ್ಬಿದರು ಮತ್ತು ಅದನ್ನು ನಾನು ನೋಡಿದೆ ಎನ್ನುವುದು ಸರಿಯಲ್ಲ. ನಾನೇನು ಬಿಡಿಸುವ ಪ್ರಯತ್ನ ಮಾಡಿಲ್ಲ. ಆರೋಪಿತರು ನನ್ನ ಸಂಬಂಧಿಯಾದ ಕಾರಣ ಬಿಡಿಸಲು ಪ್ರಯತ್ನಿಸಿಲ್ಲ ಎನ್ನುವುದು ನಿಜ. ಗಲಾಟೆಯ ಕಾಲಕ್ಕೆ ನಾವು ಮತ್ತು ಆರೋಪಿತರು ಇದ್ದೆವು ಊರ ಜನರ ಇರಲಿಲ್ಲ ಎನ್ನುವುದು ನಿಜ. ಪ್ರಾಸಾ–**2** ರವರಿಗೆ ಆರೋಪಿತರು ಕೈಕಾಲುಗಳಿಂದ ಹೊಡೆದರು ಎನ್ನುವುದು ನಿಜ. ಪ್ರಾಸಾ–**2** ರವರಿಗೆ ಹಲ್ಲೆ ಮಾಡುವವರೆಗೂ ನಾನು ಅಲ್ಲಿಯೇ ಇದ್ದೆ. ರಂಗಸ್ವಾಮಿ ಆ ಗಲಾಟೆಯನ್ನು ಬಿಡಿಸಿದ್ದು ಎಂದರೆ ನಾನು ಅದನ್ನು ನೋಡಿಲ್ಲ. ಗಲಾಟೆ ಮುಗಿಯುವರೆಗೂ ನಾನು ಅಲ್ಲಿ ಇರಲಿಲ್ಲ. ಆರಂಭದಲ್ಲಿ ರಂಗಸ್ವಾಮಿಯನ್ನು ನೋಡಿದ್ದು. ಅವರು ಆಸ್ಪತ್ರೆಗೆ ಹೋಗುವವರೆಗೂ ನಾನು ರಂಗಸ್ವಾಮಿ ಇರುವುದನ್ನು ನೋಡಿದೆ. ಸದರಿ ರಂಗಸ್ವಾಮಿ ಆ ಗಲಾಟೆಯನ್ನು ಬಿಡಿಸಿದ. ಗಲಾಟೆಯಾದ **3–4** ದಿನಗಳ ಬಳಿಕ ಪೊಲೀಸರು ಊರಿಗೆ ಬಂದಾಗ ವಿಚಾರಿಸಿದ್ದು ಅವರಿಗೆ ನಾನು ಘಟನೆ ಬಗ್ಗೆ ಹೇಳಿದ್ದೇನೆ. ಈ ದಿನ ಹೇಳಿದ್ದನ್ನೇ ಪೊಲೀಸರಿಗೆ ಆ ದಿನ ಹೇಳಿದ್ದೇನೆ. ದಿನಾಂಕ **23–08–2019** ರಂದೇ ನಾನು ಪೊಲೀಸರಿಗೆ ಘಟನೆ ಬಗ್ಗೆ ಹೇಳಿದ್ದೇನೆ ಎನ್ನುವುದು ನಿಜ. ಪೊಲೀಸರು ಠಾಣೆಗೆ ಕರೆಸಿದಾಗ ಹಿರಿಯೂರು ಠಾಣೆಗೆ ಒಮ್ಮೆ ಹೋಗಿದ್ದೆ ಎನ್ನುವುದು ನಿಜ. ಈ ಕೇಸಿನ ವಿಚಾರವಾಗಿ ನನ್ನನ್ನು ಕರೆಸಿದ್ದರು ಎನ್ನುವುದು ನಿಜ. ಐಮಂಗಲ ಪೊಲೀಸರಿಗೆ ಘಟನೆ ಬಗ್ಗೆ ನಾನು ಹೇಳಿದ್ದೇನೆ ಎನ್ನುವುದು ನಿಜ. **2019** ರಲ್ಲಿ ಘಟನೆಯಾದ ಕಾರಣ ಈಗ ಕೆಲವೊಂದು ವಿಷಯಗಳನ್ನು ನಾನು ಮರೆತಿದ್ದೇನೆ ಎನ್ನುವುದು ನಿಜ. ನಾನು ಮಣ್ಣು ಹೊಡೆಯುತ್ತಿದ್ದ ಜಾಗದಲ್ಲಿ ಮುದ್ದೆ ಮಾಲು **1** ರಂತಹ ಕಲ್ಲು ಇದ್ದವು. ತನಿಖಾಧಿಕಾರಿಗೆ ನಾನು ಬಿಎಡ್ ತಿಮ್ಮಯ್ಯ ಮುದ್ದೆ ಮಾಲು **1** ಕಲ್ಲನ್ನು ತೆಗೆದುಕೊಂಡು ಮಹಾಂತೇಶನ ಬಲ ಹಣೆಗೆ ಮತ್ತು ಮೂಗಿಗೆ ಹೊಡೆದು ರಕ್ತಗಾಯಪಡಿಸಿದ ಮತ್ತು ಎಲ್ಲರೂ ಸೇರಿ ಆತನನ್ನು ಗುಂಡಿಗೆ ಕೆಡವಿದರು ಎಂದು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಹೇಳಿಕೆಯ ಸಂಬಂಧಿಸಿದ ಭಾಗವನ್ನು ನಿಪಿ–**3** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಬಿ.ಟಿ.ವಿ.ಎಸ್. ಆರೋಪಿತರ ಪರ ವಕೀಲರಿಂದಃ**

ಶ್ರೀ ಬಿಟಿವಿಎಸ್ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.